ಶ್ರೀ ಬಿ. ಎಸ್. ವೀರಭದ್ರಪ್ಪ.—ಸ್ವಾಮಿ, ಈ ಆಹಾರ ಪದಾರ್ಥಗಳನ್ನು ತಾಲ್ಲೂಕ ಮಟ್ಟದಿಂದ ಆಯಾಯ ಕೇಂದ್ರಗಳಿಗೆ ಸಾಗಿಸಲು ಮನಾಪಲಿ ಆಗಿರುವ ಬಸ್ ರೂಟ್‌ನಲ್ಲಿ ಅದನ್ನು ತೆಗೆದುಕೊಂಡು ಹೋಗುವುದು ಕಷ್ಟವಾಗಿದೆ. ಆ ಬಸ್‌ನವರು ಇದನ್ನು ಹಾಕಿಸಿಕೊಳ್ಳುವುದಿಲ್ಲ. ಇದರಿಂದ ಕೆಲವು ಸಂದರ್ಭಗಳಲ್ಲಿ ಅಲ್ಲಿರುವ ಮಕ್ಕಳು 2-3 ದಿವಸ ಉಪವಾಸ ಬೀಳಬೇಕಾಗುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ತಾಲ್ಲೂಕು ಮಟ್ಟದಿಂದ ಪ್ರತಿಯೊಂದು ಶಾಲೆಗೂ ಬೇರೆ ರೀತಿಯಾಗಿ ಯಾವುದಾದರೂ ವಾಹನದಲ್ಲಿ ಸಾಗಿಸುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಆ ರೀತಿ ಮಾಡುವುದಕ್ಕೆ ಏನಾದರೂ ಸಾಧ್ಯತೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

VILLAGES WITHOUT PROPER ROADS IN ANKOLA TALUK

892. Smt. RADHA BHATT (Ankola).—

Will the Minister for Public Works and Electricity be pleased to state :—

(*a*) the number of villages without proper roads in Ankola Taluk of North Kanara District ;

(*b*) the number of roads constructed since last two years and the cost incurred on them by the Taluk Development Board ?

Sri H. M. CHANNABASAPPA (Minister for Public Works and Electricity).—

(*a*) 28 Villages.

(*b*) This does not relate to Public Works Department.

ಶ್ರೀಮತಿ ರಾಧಾಭಟ್.—ತಾವು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ 28 ಹಳ್ಳಿಗಳು ಎಂದು ಹೇಳಿದ್ದೀರಾ ? ಅಲ್ಲಿ ಒಂದು ರಸ್ತೆಯ ಸೌಕರ್ಯವೂ ಇಲ್ಲ. ಆದುದರಿಂದ ಮುಂದಾದರೂ ಈ ರಸ್ತೆಯನ್ನು ನಿರ್ಮಾಣ ಮಾಡಿ ಆ ಹಳ್ಳಿಗರ ಕಷ್ಟವನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದಕ್ಕೆ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ಹಾಕಿ ಮಾಡಬೇಕು. ಆದುದರಿಂದ ಈಗಾಗಲೇ ಎಲ್ಲಾ ಹಳ್ಳಿಗಳಿಗೂ ರಸ್ತೆಗಳನ್ನು ಕೊಡಬೇಕೆಂದು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಲು ಯೋಚನೆ ಮಾಡಿದ್ದೇವೆ.

ಶ್ರೀಮತಿ ರಾಧಾಭಟ್.—ಈ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ಈ 28 ಹಳ್ಳಿಗಳ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಈಗಾಗಲೇ ಈ ಬಗ್ಗೆ ಸಭೆಯಲ್ಲಿ ಹೇಳಿದ್ದೇನೆ. 5 ವರ್ಷದ ಯೋಜನೆಯಲ್ಲಿ ಪ್ರತಿಯೊಂದು ಹಳ್ಳಿಗೂ ರಸ್ತೆಯನ್ನು ಮಾಡಿಸಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಅದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ಯಾವ ಯಾವ ರೋಡುಗಳನ್ನು ಸೇರಿಸಬೇಕೆಂದು ಆಯಾಯ ಸ್ಥಳದ ಎಂ. ಎಲ್. ಎ. ಗಳ ಸಲಹೆಗಳನ್ನು ಕೇಳಿಕೊಂಡು ಮಾಡಿದ್ದೇವೆ. ಅದಕ್ಕೆ ತಾವೂ ಕೂಡಾ ಸಲಹೆ ಕೊಟ್ಟಿದ್ದೀರಾ. ಅದನ್ನು ಮಾಸ್ಟರ್ ಪ್ಲಾನಿನಲ್ಲಿ ಸೇಸಿರಿ ಕೊಳ್ಳುತ್ತೇವೆ.

FISHERY ROAD AT HARWAD

894. Smt. RADHA BHATT (Ankola).—

Will the Minister for Public Works and Electricity be pleased to state :—

(*a*) the stage of the Fishery Road work at Harwad, Ankola Taluk, North Kanara District which was sanctioned earlier ;

(*b*) when the work will be completed ?

Sri H. M. CHANNABASAPPA (Minister for Public Works and Electricity).—

(*a*) No estimate for this road work has been sanctioned.

(*b*) Does not arise in view of replies to clause (*a*) of the question.

ಶ್ರೀಮತಿ ರಾಧಾಭಟ್.—ತಾವು (ಅ) ಪ್ರಶ್ನೆಯ ಉತ್ತರವಾಗಿ ಈ ರಸ್ತೆಯ ಕೆಲಸಕ್ಕಾಗಿ ಯಾವ ಅಂದಾಜೂ ಮಂಜೂರಾಗಿಲ್ಲ ಎಂದು ಹೇಳಿದ್ದೀರಾ. ಈ ಬಗ್ಗೆ ಅನೇಕ ಸಲ ಸರ್ಕಾರವನ್ನು ಒತ್ತಾಯ ಪಡಿಸುತ್ತಿದ್ದರೂ ಸಹ ಈ ರಸ್ತೆ ನಿರ್ಮಾಣಕ್ಕೆ ಮಂಜೂರಾತಿ ಇಲ್ಲದೇ ಇರುವುದಕ್ಕೆ ಕಾರಣ ಏನು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ತಾವು ಕೇಳಿರತಕ್ಕಂಥಾದ್ದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಹಾರವಾಡದಲ್ಲಿರುವ ಮೀನುಗಾರರ ರಸ್ತೆ ಎಂದು ಕೇಳಿದ್ದೀರಾ. ಆ ಫಿಷರಿ ರೋಡಿನ ಹೆಸರು ನಮ್ಮಲ್ಲಿ ಇಲ್ಲ. ನಮ್ಮಲ್ಲಿ ಇರತಕ್ಕಂಥಾದ್ದು ಹಾರವಾಡದ ಬಿಳಿಕೇರಿ ರಸ್ತೆ ಅನ್ನುವ ಹೆಸರು ಇದೆ. ಈ ರಸ್ತೆಯನ್ನು ಕುರಿತು ಏನಾದರೂ ಪ್ರಶ್ನೆ ಕೇಳಿದ್ದೀರೋ ಏನೋ ಗೊತ್ತಿಲ್ಲ. ನೀವು ಸ್ಪಷ್ಟೀಕರಣ ಮಾಡಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀಮತಿ ರಾಧಾಭಟ್.—ಹಾರವಾಡ ಬಿಳಿಕೇರಿ ರಸ್ತೆ, ಮೀನುಗಾರರಿಗೆ ಮುಖ್ಯವಾಗಿ ಬೇಕಾದ್ದು. ಇಡಿ ಮೀನುಗಾರರಿಗೆ ರಸ್ತೆ ಸೌಕರ್ಯ ಆತ್ಯಗತ್ಯವಾಗಿರುವುದರಿಂದ ಕೂಡಲೇ ಇದಕ್ಕೆ ಮಂಜೂರಾತಿಯನ್ನು ಕೊಟ್ಟು ಕಾರ್ಯಕ್ರಮವನ್ನು ಪ್ರಾರಂಭಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಒಂದು ಮೈಲಿ ಏರಡು ಫರ್ಲಾಂಗ್ ಉದ್ದದ ರಸ್ತೆ ಇದೆ. ಇದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಮೇಂಟೆನೆನ್ಸ್‌ಗೋಸ್ಕರ ತೆಗೆದುಕೊಂಡಿದ್ದೇವೆ. ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಇದೆ. ಸಾಧ್ಯವಾದಷ್ಟು ಬೇಗ ಮಾಡಿಕೊಡುತ್ತೇವೆ.

CONSTRUCTION OF RAMAGULI—HALAVALLI ROAD IN NORTH KANARA DISTRICT.

927. Smt. RADHA BHATT (Ankola).—

Will the Minister for Public Works and Electricity be pleased to state :—

(*a*) whether the Government proposes to construct Ramaguli-Halavalli road in Ankola Taluk of North Kanara District ;

(*b*) if so, when this work will be started ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) It is contemplated to start the work after this year's Monsoon.

ಶ್ರೀಮತಿ ರಾಧಾಭಟ್.—ರಾಮಗುಳಿ–ಹಳವಳ್ಳಿ ರಸ್ತೆ ನಿರ್ಮಾಣಕ್ಕೆ ಎಷ್ಟು ರೂಪಾಯಿ ಬೇಕ್ಕಿವ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1,50,000 ರೂಪಾಯಿ ಯೋಜನೆಯನ್ನು ಸಿದ್ಧಪಡಿಸಿದ್ದೇವೆ.

ಶ್ರೀಮತಿ ರಾಧಾಭಟ್.—ಈ ರಸ್ತೆ ಪೂರ್ಣವಾಗಲು ಎಷ್ಟು ಕಾಲಾವಕಾಶ ಬೇಕು ?